ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ
59, ಜನರಲ್ ಕೆ.ಎಸ್. ತಿಮ್ಮಯ್ಯ ರಸ್ತೆ, ಬೆಂಗಳೂರು–25

**KARNATAKA STATE POLICE HOUSING & INFRASTRUCTURE DEVELOPMENT CORPORATION LTD. # 59, Gen K.S. Thimmaiah Road) Bangalore-25**
**Ph: 25584102 / 25594893/Web Site: www.ksphc.org**

ಸಂಖ್ಯೆ:ಕಾ.ಇಂ/ಕ.ರಾ.ಪೊ.ವ&ಮೂ.ಸೌ.ಅ.ನಿ.ನಿ/ಗುನಿವಿ/2024–25/೨೨ ದಿನಾಂಕ: 04.06.2024.

## ಸುತ್ತೋಲೆ

ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ದಿ ನಿಗಮ ನಿಯಮಿತ ಪ್ರಸ್ತುತ ISO 9001:2015 ಮತ್ತು 14001:2015 ರ ಮಾನ್ಯತೆ ಪಡೆದಿರುವ ಸಂಸ್ಥೆಯಾಗಿರುತ್ತದೆ ಪ್ರಸ್ತತ ನಿಗಮದಲ್ಲಿ ಅನುಷ್ಠಾನ ಗೊಳಿಸಲಾಗುತ್ತಿರುವ ವಸತಿ, ವಸತೀಯೇತರ ಕಟ್ಟಡಗಳು ಹಾಗೂ ಇತರೆ ಮೂಲಸೌಲಭ್ಯ ಸೌಕರ್ಯಗಳನ್ನು ಕಲ್ಪಿಸುತ್ತಿರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಐ.ಎಸ್.ಓ ಸರ್ಟಿಫಿಕೇಟ್ ಪಡೆಯುವ ಸಂಬಂಧ ಮೇ–2024 ರಲ್ಲಿ ಕೇಂದ್ರ ಕಛೇರಿಯಲ್ಲಿ ಬಾಹ್ಯ ಸಂಸ್ಥೆಯ ಆಡಿಟ್‌ನ ಸಮಯದಲ್ಲಿ ಗುಣನಿಯಂತ್ರಣಕ್ಕೆ ಸಂಬಂಧಿಸಿದಂತೆ ಕೆಲವು ಅಭಿಪ್ರಾಯಗಳು ಹಾಗೂ ಸುಧಾರಣೆಗಳನ್ನು ಕೈಗೊಳ್ಳಬೇಕಾಗಿರುವುದು ಕಂಡುಬಂದಿರುವ ಹಿನ್ನೆಲೆಯಲ್ಲಿ ಹಾಗೂ ಕಾಮಗಾರಿಗಳ ಗುಣಮಟ್ಟದಲ್ಲಿ ಹೆಚ್ಚಿನ ಉನ್ನತ್ತೀಕರಣಕ್ಕಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲು ನಿಗಮದ ಎಲ್ಲಾ ಅನುಷ್ಠಾನ ಅಧಿಕಾರಿಗಳಿಗೆ ಸೂಚಿಸಲಾಗಿದೆ.

1. ಕಾಮಗಾರಿಗಳ ಗುತ್ತಿಗೆ ಕರಾರಿನನ್ವಯ ಕಾಮಗಾರಿಯನ್ನು ಪ್ರಾರಂಭಿಸುವ ಮೊದಲು ಕಾಮಗಾರಿಗಳಿಗೆ ಗುಣ ಭರವಸೆ ಕಾರ್ಯಕ್ರಮ ಪಟ್ಟಿಯನ್ನು (QAP) ಸಿದ್ದಪಡಿಸಿ ಅನುಮೋದನೆ ಪಡೆದು ಕೊಳ್ಳತಕ್ಕದ್ದು.
    - ಗುತ್ತಿಗೆದಾರರು QAP ಯನ್ನು ಐ.ಎಸ್. ಕೋಡ್ ನಿಯಮಾವಳಿಗಳಂತೆ ಸಿದ್ಧಪಡಿಸುವುದು.
    - ಪಿ.ಎಂ.ಸಿ ಸಂಸ್ಥೆ/3ನೇ ತಪಾಸಣಾ ತಂಡವು QAP ಯನ್ನು ಪರಿಶೀಲಿಸುವುದು.
    - ಕಾಮಗಾರಿಯ ಅನುಷ್ಠಾನದ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರವರು QAP ಯನ್ನು ಪರಿಶೀಲಿಸಿ ಧೃಢೀಕರಿಸುವುದು.
    - ಕಾಮಗಾರಿಯ ಅನುಷ್ಠಾನ ವಿಭಾಗದ ಕಾರ್ಯಪಾಲಕ ಅಭಿಯಂತರವರು QAP ಯನ್ನು ಐ.ಎಸ್. ಕೋಡ್ ನಿಯಮಾವಳಿಗಳಂತೆ ಪರಿಶೀಲಿಸಿ ಅನುಮೋದಿಸುವುದು.
    - ಗುಣ ನಿಯಂತ್ರಣ ವಿಭಾಗದ ಕಾರ್ಯಪಾಲಕ ಅಭಿಯಂತರರು/ಸಹಾಯಕ ಕಾರ್ಯಪಾಲಕ ಅಭಿಯಂತರವರುಗಳು ಅನುಮೋಡಿತ QAP ಯನ್ನು ಮೇಲ್ವಿಚಾರಣೆ ಮಾಡುವುದು.

2. ಗುಣಭರವಸೆ ಕಾರ್ಯಕ್ರಮ (QAP) ಪಟ್ಟಿಯನ್ನು ಕಾಮಗಾರಿಗೆ ಅನುಗುಣವಾಗಿ ಹಂತ ಹಂತವಾಗಿ ಕೈಗೊಳ್ಳಬೇಕಾದ ಎಲ್ಲಾ ಪರೀಕ್ಷಾ ವಿವರಗಳನ್ನು ಒಳಗೊಂಡ ಸಮಗ್ರ ಕ್ರಿಯಯೋಜನೆಯನ್ನು ಮಹಡಿವಾರು (Floor Wise) ಸಿದ್ದಪಡಿಸತಕ್ಕದ್ದು ಹಾಗೂ ಅದರಂತೆ ಪರೀಕ್ಷೆಗಳನ್ನು ಕೈಗೊಳ್ಳತಕ್ಕದ್ದು.

3. ಕಾಮಗಾರಿಗಳಿಗೆ ಸಂಬಂಧಿಸಿದಂತೆ ವಿವಿಧ ದರ್ಜೆಯ ಕಾಂಕ್ರಿಟ್‌ಗಳ ವಿನ್ಯಾಸ ಮಿಶ್ರಣಗಳನ್ನು ಅನುಮೋದನೆಗಾಗಿ ಗುಣನಿಯಂತ್ರಣ ವಿಭಾಗಕ್ಕೆ ಸಲ್ಲಿಸುವ ಮುನ್ನ ಕಾಮಗಾರಿಯಲ್ಲಿ ಉಪಯೋಗಿಸುವ ಸಾಮಾಗ್ರಿಗಳ ಪರೀಕ್ಷೆಗಳನ್ನು ಕೈಗೊಂಡು ಪರೀಕ್ಷಾ ವರದಿಗಳೊಂದಿಗೆ ಪ್ರಸ್ತಾಪನೆಯನ್ನು ಸಲ್ಲಿಸುವುದು.

4. ಕಾಮಗಾರಿಗಳಲ್ಲಿ ಕೈಗೊಳ್ಳಲಾಗುವ ಎಲ್ಲಾ ಹಂತದ ಪರೀಕ್ಷೆಗಳನ್ನು ನಿಗಮದ ಅನುಷ್ಠಾನ ಅಧಿಕಾರಿಗಳು ಖುದ್ದಾಗಿ ಪರಿಶೀಲಿಸುವುದು ಹಾಗೂ ಪರೀಕ್ಷಾ ವರದಿಗಳನ್ನು ಧೃಡೀಕರಿಸುವ ಅಧಿಕಾರಿಗಳ ಹೆಸರು ಮತ್ತು ಪದನಾಮಗಳನ್ನು ಕಡ್ಡಾಯವಾಗಿ ನಮೂದಿಸಿ ಸಹಿಗಳೊಂದಿಗೆ ದೃಢೀಕರಿಸುವುದು.

5. ಕಾಮಗಾರಿಗಳ ಸ್ಥಳಗಳಲ್ಲಿ ಸೈಟ್ ರಿಜಿಸ್ಟ್ರ ವಹಿಯನ್ನು ನಿರ್ವಹಿಸುವುದು ಹಾಗೂ ಸದರಿ ವಹಿಯಲ್ಲಿ ಕಾಮಗಾರಿಯ ಪ್ರಾರಂಭದಿಂದ ಮುಕ್ತಾಯದವರೆಗೆ ಕೈಗೊಳ್ಳಲಾಗುವ ಎಲ್ಲಾ ಪರೀಕ್ಷಾ ವಿವರಗಳನ್ನು ದಿನಾಂಕಗಳೊಂದಿಗೆ ನಮೂದಿಸುವುದು ಹಾಗೂ ನಿಗಮದ ಮೇಲಾಧಿಕಾರಿಗಳು/ಗುಣನಿಯಂತ್ರಣ ವಿಭಾಗದ ಕಾರ್ಯಪಾಲಕ ಅಭಿಯಂತರರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರುಗಳ ಪರಿವೀಕ್ಷಣೆ ಸಮಯದಲ್ಲಿ ಹಾಜರುಪಡಿಸಿತಕ್ಕದ್ದು.

6. ಕಾಮಗಾರಿಗಳನ್ನು ಕೈಗೊಳ್ಳುವಾಗ ಕಾರ್ಮಿಕರ ಸುರಕ್ಷತೆ ಕುರಿತು ಗರಿಷ್ಠ ಮುನ್ನೆಚ್ಚರಿಕೆಗಳನ್ನು ಕೆಳಗಿನ ಐ.ಎಸ್.ಕೋಡ್‌ಗಳ ಅನ್ವಯ ಕೈಗೊಳ್ಳತಕ್ಕದು.
   - IS:3764 -Safety code for Excavation work.
   - IS:3696 Part-1- Safety code for Scaffolds & Ladder.
   - IS:7293- Safety code for working with construction machinery.
   - IS:7969- Safety code for Storage & Handling of building materials.

7. ಕಾಮಗಾರಿಗಳಲ್ಲಿ ಪರೀಕ್ಷೆಗಳನ್ನು ಕೈಗೊಳ್ಳುವ ಯಂತ್ರೋಪಕರಣಗಳಿಗೆ ಸಂಬಂಧಿಸಿದಂತೆ Calibration ವರದಿಗಳನ್ನು ಪಡೆದು ಚಾಲ್ತಿಯಲ್ಲಿರುವ ಬಗ್ಗೆ ದೃಢೀಕರಿಸಿಕೊಳ್ಳುವುದು ಹಾಗೂ ಸದರಿ ವರದಿಗಳನ್ನು ಕಡತದಲ್ಲಿ ದಾಖಲು ಮಾಡುವುದು.

8. ನಿಗಮವು ಪ್ರಸ್ತುತ ಐ.ಎಸ್.ಓ:14001:2015 Environment Management System (EMS) ಪಾಲಿಸಿಯನ್ನು ಅನುಷ್ಠಾನಗೊಳಿಸಿರುವುದರಿಂದ ಕಾಮಗಾರಿಗಳ ಸ್ಥಳದಲ್ಲಿ ಯಾವುದೇ ಮಾಲಿನ್ಯ ಉಂಟಾಗದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವುದು ಮತ್ತು ವಾಹನಗಳ ವೇಗದ ಮಿತಿಗೆ ಸಂಬಂಧಪಟ್ಟಂತೆ ಸೂಚನಾ ಫಲಕಗಳನ್ನು ಅಳವಡಿಸುವುದು.

9. Environment Management System (EMS) ಪಾಲಿಸಿಯನ್ನು ನಿಗಮದಲ್ಲಿ ಸಮರ್ಪಕವಾಗಿ ಅನುಷ್ಠಾನಗೊಳಿಸಲು ಕಾಗದ ಬಳಕೆಯನ್ನು ಮಿತವಾಗಿ ಬಳಸುವುದು ಅವಶ್ಯವಿರುವುದರಿಂದ ಕಾಮಗಾರಿಗೆ ಸಂಬಂಧಿಸಿದ QAP, ಪರೀಕ್ಷಾವರದಿಗಳು, ಪರಿವೀಕ್ಷಣಾ ಟಿಪ್ಪಣಿಗಳು, ಪಾಲನಾವರದಿಗಳು, ಛಾಯಚಿತ್ರಗಳು ಹಾಗೂ ಇತರೆ ಎಲ್ಲಾ ದಾಖಲಾತಿಗಳನ್ನು ಕಡ್ಡಾಯವಾಗಿ ನಿಗಮದ WBPMS ತಂತ್ರಾಂಶದಲ್ಲಿ ಅಳವಡಿಸುವುದು.

10/6

(ಡಾ|| ಕೆ. ರಾಮಚಂದ್ರ ರಾವ್.ಐ.ಪಿ.ಎಸ್)
ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು.

**ಪ್ರತಿಯನ್ನು ಮಾಹಿತಿ ಹಾಗು ಸೂಕ್ತ ಕ್ರಮಕ್ಕಾಗಿ:**

1. ಮುಖ್ಯ ಅಭಿಯಂತರರು, ಕ.ರಾ.ಪೊ.ವ ಮತ್ತು ಮೂ.ಸೌ.ಅ.ನಿ.ನಿ, ಬೆಂಗಳೂರು, ರವರಿಗೆ.
2. ಅಧೀಕ್ಷಕ ಅಭಿಯಂತರರು (ಉ/ದ&ಕೇಂದ್ರ), ಗುಣ ನಿಯಂತ್ರಣ ಕ.ರಾ.ಪೊ.ವ ಮತ್ತು ಮೂ.ಸೌ.ಅ.ನಿ.ನಿ, ಬೆಂಗಳೂರು, ರವರಿಗೆ.
3. ನಿಗಮದ ಎಲ್ಲಾ ಕಾರ್ಯಪಾಲಕ ಇಂಜಿನಿಯರ್, ಕ.ರಾ.ಪೊ.ವ ಮತ್ತು ಮೂ.ಸೌ.ಅ.ನಿ.ನಿ, ರವರಿಗೆ.
4. ನಿಗಮದ ಎಲ್ಲಾ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕ.ರಾ.ಪೊ.ವ ಮತ್ತು ಮೂ.ಸೌ.ಅ.ನಿ.ನಿ, ರವರಿಗೆ.
5. ತಾಂತ್ರಿಕ ಸಹಾಯಕರು–I&II, ಕ.ರಾ.ಪೊ.ವ ಮತ್ತು ಮೂ.ಸೌ.ಅ.ನಿ.ನಿ, ಬೆಂಗಳೂರು, ರವರಿಗೆ.
6. ಕಛೇರಿ ಪ್ರತಿ.